# ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# NDCPS FAMILY PENSION AND GRATUITY TRUSTS

Ph No. 080-22291150
Fax No. 080-22223558
E-mail: fpgtndcps2018@gmail.com

6th Floor,
Kaveri Bh avan,
Bangalore-560009.

ಸಂಖ್ಯೆ: ಎನ್‌ಡಿಸಿಪಿಎಸ್‌ಎಫ್‌ಪಿಜಿಟಿ/ಎಫ್2/2022-23/54-61 ದಿನಾಂಕ: 30 SEP 2022

ಗೆ,

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ),
   ಬೆವಿಕಂ,
2. ಮುಖ್ಯ ಆರ್ಥಿಕ ಅಧಿಕಾರಿ,
   ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.
3. ಆರ್ಥಿಕ ಸಲಹೆಗಾರರು(ಲೆ & ಸಂ)/(ಎನ್‌ಡಿಸಿಪಿಎಸ್),
   ಕವಿಪ್ರನಿನಿ.

ಮಾನ್ಯರೇ,

ವಿಷಯ: ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುವ ನೌಕರರ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಬಟವಾಡೆಗಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವ ಕುರಿತು.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ. ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/ 2020-21 ದಿನಾಂಕ:25.11.2020.
2. ನಿಗಮದ ಆದೇಶ ಸಂಖ್ಯೆ:ಕವಿಪ್ರನಿನಿ/ಬಿ16/ಬಿ93/36012/2021-22,ದಿನಾಂಕ:26.10.2021
3. ಹುವಿಕಂ ಪತ್ರ ಸಂಖ್ಯೆ:ಹೆಚ್.ಸಿ.ಓ-82/ಸಿ-126/2022-23/13047,ದಿನಾಂಕ:26.09.2022.

**********

1. ಉಲ್ಲೇಖ-1ರ ನಿಗಮದ ಆದೇಶದಂತೆ, 01.04.2006ರಂದು ಮತ್ತು ತದನಂತರ ಕವಿಪ್ರನಿನಿ/ವಿಸಕಂಗಳ ಸೇವೆಗೆ ಸೇರಿದ/ಸೇರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಬರುವ ನೌಕರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ 01.04.2018 ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಲಾಗಿರುತ್ತದೆ. ಈ ಆದೇಶಕ್ಕೆ ಸಂಬಂಧಿಸಿದಂತೆ, ಉಲ್ಲೇಖ-2ರಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

2. ಈ ಮಾರ್ಗಸೂಚಿಯನುಸಾರ, ಪಿಂಚಣಿ ಪಾವತಿ ಆದೇಶದಂತೆ ಕವಿಪ್ರನಿನಿ/ವಿಸಕಂಗಳ ಲೆಕ್ಕ ಘಟಕಗಳು ಪ್ರತಿ ಮಾಹೆ ಕುಟುಂಬ ಪಿಂಚಣಿಯನ್ನು ತಮ್ಮ ಕಂಪನಿಯ ನಿಗಮ ಕಛೇರಿಗೆ ಮಾಸಿಕ ಕುಟುಂಬ ಪಿಂಚಣಿ ನಿಧಿ ಕೋರಿಕೆಯನ್ನು ಸಲ್ಲಿಸಿ, ನಿಧಿಯನ್ನು ಪಡೆದು ಕುಟುಂಬ ಪಿಂಚಣಿದಾರರಿಗೆ ಬಟವಾಡೆ ಮಾಡಲು ಕ್ರಮ ವಹಿಸಬೇಕಿರುತ್ತದೆ. ಇದೇ ರೀತಿ, ನೌಕರರು ಕೊನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಲೆಕ್ಕಘಟಕಗಳೇ ತಮ್ಮ ಕಂಪನಿಯ ನಿಗಮ ಕಛೇರಿಗೆ ನಿಧಿ ಕೋರಿಕೆಯನ್ನು ಸಲ್ಲಿಸಿ, ನಿವೃತ್ತಿದಾರರಿಗೆ/ಅವಲಂಬಿತರಿಗೆ ನಿವೃತ್ತಿ/ಮರಣ ಉಪದಾನವನ್ನು ಬಟವಾಡೆ ಮಾಡಬೇಕಿರುತ್ತದೆ.

3. ಕವಿಪ್ರನಿನಿ/ವಿಸಕಂಗಳ ಹಲವಾರು ಲೆಕ್ಕಘಟಕಗಳು ಕುಟುಂಬ ಪಿಂಚಣಿ ಪಾವತಿಗೋಸ್ಕರ ಬ್ಯಾಂಕ್ ಖಾತೆಯನ್ನು ತೆರೆಯುವ ಕುರಿತು ಈ ಕಛೇರಿಯನ್ನು ಸಂಪರ್ಕಿಸುತ್ತಿವೆ. ಈ ದಿಸೆಯಲ್ಲಿ ಉಲ್ಲೇಖ-2ರ ಮಾರ್ಗಸೂಚಿಯ ಕಂಡಿಕೆ-I ಉಪಕಂಡಿಕೆ-10ರಲ್ಲಿ ತಿಳಿಸಿರುವಂತೆ ಕುಟುಂಬ ಪಿಂಚಣಿ ಬಟವಾಡೆ ಲೆಕ್ಕಘಟಕಗಳು ಮಾಸಿಕ ಕುಟುಂಬ ಪಿಂಚಣಿ ಬಟವಾಡೆಗಾಗಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು (ಉಳಿತಾಯ ಖಾತೆಗೆ ಆದ್ಯತೆ ನೀಡುವುದು) ತೆರೆಯುವುದು ಮತ್ತು ಪ್ರತ್ಯೇಕ ನಗದು ಪುಸ್ತಕವನ್ನು ನಿರ್ವಹಣೆ ಮಾಡುವುದು.

   ಉಪಕಂಡಿಕೆ-13ರಲ್ಲಿ ತಿಳಿಸಿರುವಂತೆ ಲೆಕ್ಕಘಟಕಗಳಿಗೆ ಪ್ರತಿ ಮಾಹೆ ಕುಟುಂಬ ಪಿಂಚಣಿ ನಿಧಿ ಮತ್ತು ಉಪದಾನ ಬಿಡುಗಡೆ ಮಾಡಿದ ಮೊತ್ತವನ್ನು ಕ್ರಮವಾಗಿ, Receivable from NDCPS Family Pension Trust ಮತ್ತು Receivable from NDCPS Gratuity Trust ಎಂದು ಲೆಕ್ಕೀಕರಿಸುವುದು. ಈ ಸಂಬಂಧ, ಕಂಪನಿಗಳು ತಮ್ಮ ವ್ಯಾಪ್ತಿಯಲ್ಲಿಯೇ ಸೂಕ್ತ ಲೆಕ್ಕ ವಿಧಾನವನ್ನು ಅಳವಡಿಸಿಕೊಳ್ಳುವಂತೆಯೂ ತಿಳಿಸಲಾಗಿರುತ್ತದೆ.

4. ಆದಾಯ ತೆರಿಗೆ ನಿಯಮಾವಳಿಗಳು 1962ರ ಸೆಕ್ಷನ್ 101ರ ಅನ್ವಯ ನಿವೃತ್ತಿ ಉಪಲಬ್ಧಗಳ ಪಾವತಿಗಾಗಿ ಉಳಿತಾಯ ಖಾತೆಯನ್ನು ತೆರೆಯಲು ಅವಕಾಶ ಕಲ್ಪಿಸಲಾಗಿದ್ದು, ಕನಿಷ್ಠ ಶಿಲ್ಕು ನಿರ್ವಹಣೆ ಮತ್ತು ಶಿಲ್ಕಿನ ಮೇಲೆ ಬಡ್ಡಿ ಗಳಿಕೆಯಾಗುವುದರಿಂದ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿಯೇ (ಸಾಧ್ಯವಾದಷ್ಟು ಭಾರತೀಯ ಸ್ಟೇಟ್ ಬ್ಯಾಂಕ್) ಉಳಿತಾಯ ಖಾತೆಯನ್ನು ತೆರೆಯುವಂತೆ ತಮ್ಮ ವ್ಯಾಪ್ತಿಯ ಕುಟುಂಬ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ.

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು & ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ & ವಿಸಕಂಗಳ ಎನ್‌ಡಿಸಿಪಿಎಸ್
ಕುಟುಂಬ ಪಿಂಚಣಿ & ಉಪದಾನ ಟ್ರಸ್ಟ್.

<u>ಪ್ರತಿ ಸೂಕ್ತ ಕ್ರಮಕ್ಕಾಗಿ:</u>

ಲೆಕ್ಕಾಧಿಕಾರಿ(ಪಿಂಚಣಿ/ಪಿಂಚಣಿ ಕೋಶ), ಕವಿಪ್ರನಿನಿ/ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.